"ಮಧುರ ಮಕ್ಕಳೇ ಜ್ಞಾನಕ್ಕೆ ಅಗ್ನಿ ಎಂದು ಹೇಳುವುದಿಲ್ಲ, ಯೋಗ ಅಗ್ನಿ ಆಗಿದೆ, ಯೋಗದಲ್ಲಿ ಇರುವುದರಿಂದಲೇ ತಮ್ಮ ಪಾಪ ಭಸ್ಮವಾಗುತ್ತದೆ, ತಾವು ಸ್ವಚ್ಛ ಸುಂದರರಾಗುತ್ತೀರಿ"

ಪ್ರಶ್ನೆ: ಯಾವ ಮಕ್ಕಳ ಬುದ್ಧಿ ರೂಪಿ ಬತ್ತಳಿಕೆಯಲ್ಲಿ ಜ್ಞಾನ ಬಾಣ ಸದಾ ತುಂಬಿರುತ್ತದೆ?

ಉತ್ತರ: ಯಾರು ಪ್ರತಿನಿತ್ಯ ವಿದ್ಯೆಯನ್ನು ಚೆನ್ನಾಗಿ ಓದುತ್ತಾರೆ ಮತ್ತು ಓದಿಸುತ್ತಾರೆ, ಅವರ ಬುದ್ಧಿ ಎಂಬ ಬತ್ತಳಿಕೆಯಲ್ಲಿ ಜ್ಞಾನದ ಬಾಣ ತುಂಬಿರುತ್ತದೆ. ಅವರೇ ಮಾತಾ-ಪಿತರ ಸಮಾನ ಮುಳ್ಳುಗಳನ್ನು ಮೊಗ್ಗುಗಳು ಹಾಗೂ ಮೊಗ್ಗುಗಳನ್ನು ಹೂಗಳನ್ನಾಗಿ ಮಾಡುವ ಸೇವೆ ಮಾಡಲು ಸಾಧ್ಯ. ಯಾರು ಚೆನ್ನಾಗಿ ಓದುತ್ತಾರೆಯೋ ಹಾಗೂ ಓದಿಸುತ್ತಾರೆಯೋ ಅವರೇ ಶ್ರೇಷ್ಠ ಪದವಿ ಪಡೆಯುತ್ತಾರೆ.

ಗೀತೆ: ನನ್ನ ಮನದ ಬಾಗಿಲಿಗೆ ಯಾರು ಬಂದರು..................

ಓಂ ಶಾಂತಿ. ಮಕ್ಕಳಿಗೆ ಓಂಶಾಂತಿಯ ಅರ್ಥವನ್ನಂತೂ ತಿಳಿಸಲಾಗಿದೆ. ಓಂ ಅಂದರೆ ಆತ್ಮ. ಆತ್ಮ ಹೇಳುತ್ತದೆ ನನ್ನ ಸ್ವಧರ್ಮ ಶಾಂತಿಯಾಗಿದೆ ಹಾಗೂ ನಾನು ಶಾಂತಿದೇಶದ ನಿವಾಸಿ ಆಗಿದ್ದೇನೆ. ಇಲ್ಲಿ ಈ ಕರ್ಮೇಂದ್ರಿಯಗಳು ಸಿಕ್ಕಿದ ಮೇಲೆ ಶಬ್ದದಲ್ಲಿ ಬರುತ್ತೇವೆ. ಶರೀರದ ಆಧಾರವನ್ನು ಪಡೆದು ನಾನಾತ್ಮ ಕರ್ಮ ಮಾಡುತ್ತೇನೆ. ಕರ್ಮವಂತೂ ಕರ್ಮೇಂದ್ರಿಯಗಳಿಂದಲೇ ಮಾಡಲಾಗುತ್ತದೆಯಲ್ಲವೇ. ಆತ್ಮ ಹೇಳುತ್ತದೆ ಇವರು ಯಾರು, ಎಲ್ಲಿಂದ ಬಂದಿದ್ದಾರೆ? ಅವರನ್ನು ನಾವು ನೆನಪು ಮಾಡುತ್ತೇವೆ ಮತ್ತೆ ಪದೇ-ಪದೇ ಮರೆತು ಹೋಗುತ್ತೇವೆ ಏಕೆಂದರೆ ಈ ತಂದೆಯ ನೆನಪಿನಲ್ಲಿ ಎಂದೂ ಸಹ ಕುಳಿತೇ ಇಲ್ಲ. ಬೇರೆ ಸತ್ಸಂಗದಲ್ಲಿ ಸನ್ಯಾಸಿ, ವಿದ್ವಾಂಸರು ಮುಂತಾದವರು ಕುಳಿತಿರುತ್ತಾರೆ. ಅವರು ವೇದ, ಉಪನಿಷತ್ತು, ರಾಮಾಯಣ ಮುಂತಾದವನ್ನು ಹೇಳುತ್ತಾರೆ. ಆತ್ಮನ ಬುದ್ಧಿಯಲ್ಲಿ ಶಾಸ್ತ್ರವೇ ನೆನಪಿರುತ್ತದೆ, ಗುರುವನ್ನು ನೋಡಲು ತೊಡಗುತ್ತಾರೆ. ಇಲ್ಲಂತೂ ನಿಮಗೆ ಗೊತ್ತಿದೆ ಪರಮಪಿತ ಪರಮಾತ್ಮ ಬರುತ್ತಾರೆ. ಅವರೂ ಸಹ ಆತ್ಮ ಆಗಿದ್ದಾರೆ ಆದರೆ ಅವರು ಪರಮ ಆತ್ಮನಾಗಿದ್ದಾರೆ. ಅವರು ಬಂದು ಇವರಲ್ಲಿ ಪ್ರವೇಶ ಮಾಡುತ್ತಾರೆ. ತಮಗೆ ಗೊತ್ತಿದೆ ಪರಮಪಿತ ಪರಮಾತ್ಮ ಇವರಲ್ಲಿ ಕುಳಿತು ಸಹಜ ರಾಜಯೋಗವನ್ನು ನಮಗೆ ಕಲಿಸುತ್ತಾರೆ. ತಮ್ಮ ಬುದ್ಧಿಯು ಶಾಸ್ತ್ರಗಳಕಡೆ ಅಥವಾ ದೇಹದಕಡೆ ಹೋಗುವುದಿಲ್ಲ. ತಾವು ತಮ್ಮನ್ನು ಅಶರೀರಿ ಆತ್ಮ ಎಂದು ನಿಶ್ಚಯ ಮಾಡಿಕೊಳ್ಳಬೇಕು. ಮೊದಲು ಆತ್ಮದ ಆಧಾರದಿಂದಲೇ ಶರೀರ ನಡೆಯುತ್ತದೆ. ಆತ್ಮ ಅವಿನಾಶಿಯಾಗಿದೆ. ನಾವು ಬೇಹದ್ದಿನ ತಂದೆಯಿಂದ ಆಸ್ತಿಯನ್ನು ಪಡೆಯುತ್ತಿದ್ದೇವೆ. ತಂದೆ ತಮ್ಮ ಹಾಗೂ ಮನುಷ್ಯ ಸೃಷ್ಟಿಯ ಆದಿ-ಮಧ್ಯ-ಅಂತ್ಯದ ಪರಿಚಯವನ್ನು ಕೊಡುತ್ತಾರೆ. ಅವರಿಗೆ ಜ್ಞಾನಸಾಗರ ಎನ್ನಲಾಗುತ್ತದೆ. ಈಶ್ವರ ಹಾಗೂ ಅವರ ರಚನೆಯ ಜ್ಞಾನ ಬೇರೆ ಯಾರಲ್ಲೂ ಇಲ್ಲ. ಋಷಿ, ಮುನಿಗಳು ಮುಂತಾದವರು ಬೇಅಂತ್ ಎಂದು ಹೇಳುತ್ತಾ ಬಂದರು. ರಚಯಿತ ಹಾಗೂ ರಚನೆಯ ಬಗ್ಗೆ ನಮಗೆ ಗೊತ್ತಿಲ್ಲ ಎಂದು ಹೇಳುತ್ತಿದ್ದರು. ತಂದೆ ಮಕ್ಕಳನ್ನು ಪ್ರತ್ಯಕ್ಷ ಮಾಡುತ್ತಾರೆ ಎಂದು ಹೇಳಲಾಗುತ್ತದೆ. ತಂದೆ ತನ್ನ ಪರಿಚಯವನ್ನು ಮಕ್ಕಳಿಗೆ ಕೊಡುತ್ತಾರೆ. ಮಕ್ಕಳು ತಂದೆ ಪರಿಚಯವನ್ನು ಅನ್ಯರಿಗೆ ಕೊಡುತ್ತಾರೆ. ಮನುಷ್ಯರಂತೂ ಆ ತಂದೆಯನ್ನು ಅರಿತುಕೊಳ್ಳದೇ ಇರುವ ಕಾರಣ ಸರ್ವವ್ಯಾಪಿ ಎಂದು ಹೇಳಿಬಿಡುತ್ತಾರೆ. ಈಗ ನೀವು ಮಕ್ಕಳ ಹೃದಯದಲ್ಲಿ ತಂದೆಯ ನೆನಪು ಬಂದಿದೆ. ಆದರೆ ನಿಮ್ಮಲ್ಲಿ ತಂದೆ ಪ್ರವೇಶ ಮಾಡಿದ್ದಾರೆಂದಲ್ಲ. ನೆನಪು ಬಂದಿದೆ ಎಂದರೆ ಅರ್ಥ ತಂದೆಯ ಪರಿಚಯ ಸಿಕ್ಕಿದೆ. ಈಗ ತಂದೆ ತಿಳಿಸುತ್ತಾರೆ - ಮಕ್ಕಳೇ ನನ್ನನ್ನು ನೆನಪು ಮಾಡಿದರೆ ಆ ಯೋಗಾಗ್ನಿಯಿಂದ ನಿಮ್ಮ ವಿಕರ್ಮಗಳು ವಿನಾಶ ಆಗುತ್ತವೆ. ಜ್ಞಾನಕ್ಕೆ ಅಗ್ನಿ ಎಂದು ಹೇಳುವುದಿಲ್ಲ. ಯೋಗಕ್ಕೆ ಅಗ್ನಿ ಎಂದು ಹೇಳಲಾಗುತ್ತದೆ ಏಕೆಂದರೆ ಇದರಿಂದ ಪಾಪಗಳು ಭಸ್ಮವಾಗುತ್ತದೆ. ಮತ್ತ್ಯಾರ ನೆನಪಿನಿಂದಲೂ ಪಾಪಗಳು ಭಸ್ಮವಾಗುವುದಿಲ್ಲ. ಇದೆಲ್ಲಾ ಆಟವು ಭಾರತದಲ್ಲಿ ಮಾಡಲ್ಪಟ್ಟಿದೆ. ಭಾರತವೇ ವಜ್ರ ಸಮಾನವಾಗಿತ್ತು. ಅಂತ್ಯದಲ್ಲಿ ಭಾರತವು ಮತ್ತೆ ಕವಡೆ ಸಮಾನ ಆಗುತ್ತದೆ. ಭಾರತದಲ್ಲಿ ವಜ್ರ-ರತ್ನಗಳ ಮಹಲ್ಗಳು ನಿರ್ಮಾಣವಾಗುತ್ತವೆ. ಸೋಮನಾಥ ಮಂದಿರದಲ್ಲಿ ಎಷ್ಟೊಂದು ಸಂಪತ್ತು ಇತ್ತು. ಭಾರತದಂತಹ ಸಂಪತ್ತು ಭರಿತ ದೇಶವು ಮತ್ತ್ಯಾವುದೂ ಆಗಲು ಸಾಧ್ಯವಿಲ್ಲ. ಭಾರತವಾಸಿಗಳು ಮಹಾನ್ ಸುಖಿಗಳಾಗಿದ್ದರು. ಇದು 5000 ವರ್ಷಗಳ ಮಾತಾಗಿದೆ ಎಂದು ನೀವು ಮಕ್ಕಳಿಗೆ ನೆನಪಿಗೆ ಬಂದಿದೆ. ಕ್ರಿಸ್ತನಿಗಿಂತ 3000 ವರ್ಷಗಳ ಹಿಂದೆ ನೀವು ಭಾರತವಾಸಿಗಳು ಎಷ್ಟು ಸಾಹುಕಾರರಾಗಿದ್ದಿರಿ ಈಗಂತೂ ಸಂಪೂರ್ಣ ಬಡವರಾಗಿಬಿಟ್ಟಿದ್ದೀರಿ. ಸರ್ಕಾರವೂ ಸಹ ಪ್ರಜೆಗಳಿಂದ ಸಾಲವನ್ನು ತೆಗೆದುಕೊಳ್ಳುತ್ತಿರುತ್ತದೆ. ಇದನ್ನು ಬೇಹದ್ದಿನ ತಂದೆಯೇ ತಿಳಿಸುತ್ತಾರೆ.

ನೀವು ಶ್ರೇಷ್ಠಾತಿಶ್ರೇಷ್ಠ ಶಿವತಂದೆಯ ಮತದಂತೆ ನಡೆಯುವುದರಿಂದ ಸ್ವರ್ಗದಲ್ಲಿ ಶ್ರೇಷ್ಠಾತಿಶ್ರೇಷ್ಠ ದೇವೀ-ದೇವತೆಗಳಾಗುತ್ತೀರಿ. ಮನುಷ್ಯರಿಂದ ದೇವತೆಗಳಾಗಲು ತಾವು ಇಲ್ಲಿ ಬಂದಿದ್ದೀರಿ. ಏಕ್ ಓಂಕಾರ್, ಸತ್ನಾಮ್ ಕರ್ತಾ ಪುರುಷ್.......... ಈ ಮಹಿಮೆ ಎಲ್ಲವೂ ಒಬ್ಬ ತಂದೆಯದಾಗಿದೆ. ಅವರನ್ನು ಮೃತ್ಯು ಎಂದೂ ಕಬಳಿಸುವುದಿಲ್ಲ. ಆ ತಂದೆಯೇ ಮನುಷ್ಯರನ್ನು ದೇವತೆಗಳನ್ನಾಗಿ ಮಾಡುತ್ತಾರೆ. ಕೊಳಕಾಗಿರುವ ವಸ್ತ್ರಗಳನ್ನು ಸ್ವಚ್ಛಗೊಳಿಸುತ್ತಾರೆ. ನೀವು ಆತ್ಮರನ್ನು ಜ್ಞಾನ-ಯೋಗದಿಂದ ಸ್ವಚ್ಛ ಸುಂದರರನ್ನಾಗಿ

ಮಾಡುತ್ತಾರೆ. ನಿಮಗೆ ತಂದೆಯಿಂದ ಲಕ್ಷ್ಯವು ಸಿಗುತ್ತದೆ - ಮಕ್ಕಳೇ ಶಿವತಂದೆಯನ್ನು ನೆನಪು ಮಾಡಿ, ಇದರಿಂದ ನೀವು ಬಹಳ ಸುಂದರರಾಗಿಬಿಡುತ್ತೀರಿ. ಆತ್ಮ ಮತ್ತು ಶರೀರ ಸುಂದರವಾಗಿಬಿಡುತ್ತದೆ. ಮೂಲತಃ ನಿಮ್ಮ ಹೆಸರು ಶ್ಯಾಮಸುಂದರ ಆಗಿದೆ ಏಕೆಂದರೆ ಸತ್ಯಯುಗದಲ್ಲಿ ಶರೀರ ಹಾಗೂ ಆತ್ಮ ಎರಡೂ ಸುಂದರವಾಗಿ ಇರುತ್ತದೆ. ನಂತರ ಕಲಿಯುಗದಲ್ಲಿ ಶ್ಯಾಮ ಅಥವಾ ಕಪ್ಪಾಗಿಬಿಡುತ್ತೀರಿ. ಸುಂದರರಿಂದ ಶ್ಯಾಮ ನಂತರ ಶ್ಯಾಮರಿಂದ ಸುಂದರರಾಗುತ್ತೀರಿ.

ನಿಮಗೆ ಗೊತ್ತಿದೆ - ಇವರು ಯಾವುದೇ ಗುರು ಗೋಸಾಯಿ ಅಲ್ಲ. ಪರಮಧಾಮದಲ್ಲಿ ಇರುವ ಪರಮಪ್ರಿಯ ತಂದೆಯಾಗಿದ್ದಾರೆ. ಯಾವಾಗ ಧರ್ಮದ ನಿಂದನೆ ಆಗುತ್ತದೆಯೋ ಭಾರತವಾಸಿಗಳು ಧರ್ಮಭ್ರಷ್ಟ, ಕರ್ಮಭ್ರಷ್ಟರು ಆಗಿಬಿಡುತ್ತಾರೆ ಆಗ ನಾನು ಬರುತ್ತೇನೆ ಎಂದು ತಂದೆಯು ತಿಳಿಸುತ್ತಾರೆ. ಇದೂ ಸಹ ಆಟವಾಗಿದೆ. ಭಾರತವೇ ಸಂಪತ್ತಭರಿತ, ಸಂಪತ್ತರಹಿತ ಆಗುತ್ತದೆ. ತಂದೆಗೆ ಜ್ಞಾನಪೂರ್ಣ, ಜ್ಞಾನಸಾಗರ ಎಂದು ಹೇಳಲಾಗುತ್ತದೆ. ಯಾವಾಗ ಭಕ್ತಿಯು ಪೂರ್ಣ ಆಗುತ್ತದೆಯೋ ಆಗಲೇ ಜ್ಞಾನಸಾಗರ ತಂದೆಯು ಬರುತ್ತಾರೆ. ಜ್ಞಾನಾಂಜನವನ್ನು ಸದ್ಗುರು ಕೊಟ್ಟರು ಅಜ್ಞಾನ ಅಂಧಕಾರವು ವಿನಾಶ ಆಯಿತು ಎಂದು ಗಾಯನವಿದೆ. ಅಂದರೆ ಈ ಸಮಯದಲ್ಲಿ ಎಲ್ಲರೂ ಕುಂಭಕರ್ಣನ ಅಜ್ಞಾನ ನಿದ್ರೆಯಲ್ಲಿ ಮಲಗಿಬಿಟ್ಟಿದ್ದಾರೆ. ಓ! ಪರಮಪಿತ ಪರಮಾತ್ಮನೇ ಎಂದು ಹೇಳುತ್ತಾರೆ ಆದರೆ ಆ ಪಿತನನ್ನೇ ಅರಿತುಕೊಂಡಿಲ್ಲ. ಈಗ ಆ ತಂದೆಯೇ ಬಂದು ತಿಳಿಸುತ್ತಾರೆ - ತಮ್ಮನ್ನು ಈಗ ಆತ್ಮ ಎಂದು ನಿಶ್ಚಯ ಮಾಡಿಕೊಳ್ಳಿ. ಆತ್ಮವೇ ಪತಿತವಾಗುತ್ತದೆ ನಂತರ ಆತ್ಮವೇ ಪಾವನವಾಗಿಬಿಡುತ್ತದೆ. ಸತ್ಯಯುಗದಲ್ಲಿ ಪಾವನರಾಗಿದ್ದಿರಿ ನಂತರ 84 ಜನ್ಮಗಳ ಅಂತಿಮ ಜನ್ಮವೆಂದು ಈಗ ತಿಳಿದಿದೆ, ಎಲ್ಲಾ ಮಾತುಗಳ ಅನುಭವಿಗಳಾಗಿದ್ದೀರಿ. ಅವಶ್ಯವಾಗಿ ನನಗೆ ಅನುಭವಿ ಶರೀರವು ಬೇಕಲ್ಲವೇ. ಇವರು (ಬ್ರಹ್ಮಾ) ಗುರು ಮುಂತಾದವರನ್ನು ಮಾಡಿಕೊಂಡಿದ್ದಾರೆ ಆದರೆ ಕೃಷ್ಣನಿಗೆ ಗುರು ಗೋಸಾಯಿಗಳನ್ನು ಮಾಡಿಕೊಳ್ಳುವ ಅವಶ್ಯಕತೆ ಇಲ್ಲ. ಇದು ಮರೆತು-ಮರೆಯಿಸುವ ಆಟವಾಗಿದೆ. ಮನುಷ್ಯರು ತಮ್ಮ ಕಲ್ಪನೆಗಳನ್ನು ಕುಳಿತು ಬರೆದಿದ್ದಾರೆ. ನೀವು ಬ್ರಾಹ್ಮಣ ಕುಲಭೂಷಣರು ಶ್ರೇಷ್ಠರಾಗಿದ್ದೀರಿ, ಈಶ್ವರೀಯ ಸಂತಾನರಾಗಿದ್ದೀರಿ. ಇಲ್ಲಿ ನೀವು ಯಜ್ಞದ ಸತ್ಯ-ಸತ್ಯ ಸೇವೆಯನ್ನು ಮಾಡುತ್ತೀರಿ. ವಾಸ್ತವದಲ್ಲಿ ನೀವು ಆತ್ಮೀಯ ಸಮಾಜ ಸೇವಕರಾಗಿದ್ದೀರಿ, ಅವರು ಶಾರೀರಿಕ ಸಮಾಜಿಕ ಸೇವಕರಾಗಿದ್ದಾರೆ.

ತಂದೆಯು ಆತ್ಮಗಳಿಗೆ ಓದಿಸುತ್ತಾರೆ. ಆತ್ಮವೇ ಓದುತ್ತದೆಯಲ್ಲವೇ, ಆತ್ಮವೇ ಕೇಳುತ್ತದೆ. ನಾನು ಬ್ಯಾರಿಸ್ಟರ್ ಆಗಿದ್ದೇನೆ..... ಎಂದು ಆತ್ಮವೇ ಹೇಳುತ್ತದೆ. ಅವರು ಬೇಹದ್ದಿನ ತಂದೆ, ಎಲ್ಲರ ತಂದೆಯಾಗಿದ್ದಾರೆ. ಅವರೇ ನಮಗೆ ರಾಜಯೋಗವನ್ನು ಕಲಿಸುತ್ತಾರೆ. ನಿರಾಕಾರನಾಗಿದ್ದಾರೆ. ಬ್ರಹ್ಮಾ-ವಿಷ್ಣು-ಶಂಕರನಿಗೆ ಭಗವಂತನೆಂದು ಹೇಳುವುದಿಲ್ಲ. ಅವರು ದೇವತೆಗಳಾಗಿದ್ದಾರೆ. ಹೇಗೆ ಬ್ರಹ್ಮಾದೇವತಾಯ ನಮಃ ಎಂದು ಹೇಳಲಾಗುತ್ತದೆಯಲ್ಲವೇ. ಈ ಸಾಕಾರ ಬ್ರಹ್ಮಾರವರೇ ಯಾವಾಗ ಸೂಕ್ಷ್ಮವತನವಾಸಿ ಅವ್ಯಕ್ತರಾಗುತ್ತಾರೆ ಆಗ ಇವರನ್ನು ದೇವತೆ ಎಂದು ಹೇಳುತ್ತಾರೆ. ಅಂದಾಗ ಇದೆಲ್ಲವೂ ತಿಳಿದುಕೊಳ್ಳುವ ಹಾಗೂ ತಿಳಿಸುವ ಮಾತುಗಳಾಗಿವೆ. ದಿನ-ಪ್ರತಿದಿನ ಗುಹ್ಯಕ್ಕಿಂತ ಗುಹ್ಯ ಮಾತುಗಳನ್ನು ತಿಳಿಸುತ್ತೇನೆ ಅಂದಮೇಲೆ ಅದನ್ನು ಕೇಳಬೇಕು. ಒಂದುವೇಳೆ ನಿಮಗೆ ಬಿಡುವಿಲ್ಲವೆಂದು ಹೇಳಿ, ಕೇಳದೇ ಇದ್ದರೆ ಹೊಸ-ಹೊಸ ಜ್ಞಾನದ ಬಾಣಗಳನ್ನು ಬುದ್ಧಿರೂಪಿ ಬತ್ತಳಿಕೆಯಲ್ಲಿ ಹೇಗೆ ತುಂಬಿಸಿಕೊಳ್ಳುತ್ತೀರಿ! ಯಾರು ಚೆನ್ನಾಗಿ ಓದಿ ಓದಿಸುತ್ತಾರೆ ಅವರೇ ಶ್ರೇಷ್ಠ ಪದವಿಯನ್ನು ಪಡೆಯುತ್ತಾರೆ. ಮಮ್ಮಾ-ಬಾಬಾರವರೂ ಸಹ ಓದಿ ಅನ್ಯರಿಗೆ ಓದಿಸುತ್ತಾರಲ್ಲವೇ ಅಂದಮೇಲೆ ಯಾರು ಮುಳ್ಳುಗಳನ್ನು ಮೊಗ್ಗುಗಳನ್ನಾಗಿ ಮತ್ತು ಮೊಗ್ಗುಗಳನ್ನು ಹೂಗಳನ್ನಾಗಿ ಮಾಡುತ್ತಾ ಇರುತ್ತಾರೆ ಅವರೇ ಶ್ರೇಷ್ಠಪದವಿಯನ್ನು ಪಡೆಯುತ್ತಾರೆ. ಇದು ಬಹಳ ಸಹಜವಾಗಿದೆ, ಇದರಲ್ಲಿ ಹೆದರುವ ಮಾತಿಲ್ಲ. ಇದಂತೂ ಬಹಳ ಪರಿಶ್ರಮ, ಅಸಂಭವವಾಗಿದೆ ಎಂದು ಅನೇಕರು ಹೇಳುತ್ತಾರೆ. ಅಂದಮೇಲೆ ಪರಿಶ್ರಮವಾಗುತ್ತದೆ ಎಂದರೆ ಈ ಲಕ್ಷ್ಮೀ-ನಾರಾಯಣರು ಹೇಗಾದರು! ಇದು ಯಾರಿಗೂ ಗೊತ್ತಿಲ್ಲ. ಮಕ್ಕಳೇ ನಾನು ಇವರಲ್ಲಿ ಪ್ರವೇಶ ಮಾಡುತ್ತೇನೆ ಎಂದು ತಂದೆಯು ತಿಳಿಸುತ್ತಾರೆ. ಇವರೇ ಬ್ರಹ್ಮ. ಪೂರ್ಣ 84 ಜನ್ಮಗಳನ್ನು ತೆಗೆದುಕೊಂಡಿದ್ದಾರೆ. ಇವರ ಜನ್ಮಗಳ ಬಗ್ಗೆ ಇವರಿಗೇ ಗೊತ್ತಿಲ್ಲ. ನೀವು ಕೃಷ್ಣಪುರಿಯ ಮಾಲೀಕರಾಗಿದ್ದಿರಿ ಎಂದು ನಾನು ತಿಳಿಸುತ್ತೇನೆ. ಈಗ ಅದು ಕಳೆದುಹೋಯಿತು. ಅದು ಈಗ ಹೇಗೆ ಸ್ವಪ್ನವಾಗಿಬಿಟ್ಟಿದೆ. ಹೇಗೆ ನೆಹರು ಶರೀರ ಬಿಟ್ಟರು ಅದು ಸ್ವಪ್ನವಾಯಿತು ಮತ್ತು ಅವರು ಯಾವ ಪಾತ್ರವನ್ನು ಮಾಡಿದರೋ ಅದು ಕಳೆದುಹೋಯಿತು. ನೀವು ಬ್ರಹ್ಮಾಂಡ, ಮೂಲವತನ, ಸೂಕ್ಷ್ಮವತನವನ್ನು, ಬ್ರಹ್ಮಾ-ವಿಷ್ಣು-ಶಂಕರರ ಇತಿಹಾಸವನ್ನು ತಿಳಿದುಕೊಂಡಿದ್ದೀರಿ. ಶಿವತಂದೆ, ಲಕ್ಷ್ಮೀ-ನಾರಾಯಣ ಮುಂತಾದವರೆಲ್ಲರ ಇತಿಹಾಸವನ್ನು ತಾವು ತಿಳಿದುಕೊಂಡಿದ್ದೀರಿ. ಈಗ ನಿಮ್ಮ ಬುದ್ಧಿಯಲ್ಲಿ ಎಲ್ಲಾ ಜ್ಞಾನವಿದೆ. ಬ್ರಾಹ್ಮಣವರ್ಣವು ಎಲ್ಲದಕ್ಕಿಂತ ಶ್ರೇಷ್ಠವಾಗಿದೆ. ಶಿಖೆಯು ಬ್ರಾಹ್ಮಣರ ಚಿನ್ಹೆಯಾಗಿದೆ. ಬ್ರಾಹ್ಮಣರಿಗಿಂತಲೂ ಮೇಲೆ ಶಿವತಂದೆ ಇದ್ದಾರೆ. ಬ್ರಾಹ್ಮಣ, ದೇವತಾ, ಕ್ಷತ್ರಿಯ, ವೈಶ್ಯ, ಶೂದ್ರ ನೀವು ಚಕ್ರವನ್ನು ಸುತ್ತುತ್ತೀರಿ, ನಾನೇ ಅದು, ಅದು ನಾನೇ (ಹಮ್ ಸೋ ಸೋ ಹಮ್) ಇದು ನಿಮಗೆ ಹೋಲಿಕೆ ಆಗುತ್ತದೆ. ನಾವೇ ಶುದ್ರರಾಗಿದ್ದೆವು ಮತ್ತೆ ನಾವೇ ಬ್ರಾಹ್ಮಣರಾಗಿದ್ದೇವೆ ನಂತರ ನಾವೇ ದೇವತೆಗಳಾಗುತ್ತೇವೆ. ಎಷ್ಟು ಸಹಜ ಮಾತಾಗಿದೆ. ಬಾಕಿ ನಾವು ಆತ್ಮಗಳೇ ಪರಮಾತ್ಮನೆಂದು ಹೇಳುವುದು, ತಂದೆಯನ್ನು ಸರ್ವವ್ಯಾಪಿ ಎಂದು ಹೇಳುವುದು ತಂದೆಯ ನಿಂದನೆ ಆಗಿದೆ. ಈಗ ತಂದೆಯು ಬಂದಿದ್ದಾರೆ ಹಾಗೂ ತಿಳಿಸುತ್ತಾರೆ - ಮಕ್ಕಳೇ ಈ ರಾವಣನು ನಿಮಗೆ ಎಲ್ಲರಿಗಿಂತ ಹಳೆಯ ಶತ್ರುವಾಗಿದ್ದಾನೆ. ಇವನೇ ನಿಮ್ಮನ್ನು ಇಂತಹ ಪತಿತ ಕವಡೆಯ ಸಮಾನ ಮಾಡಿಬಿಟ್ಟಿದ್ದಾನೆ. ಮಾಯಾಜೀತರೇ ಜಗಜ್ಜೀತರು ಎಂದು ಹೇಳಲಾಗುತ್ತದೆ. ಮಾಯೆಯು ಬಹಳ ಬಿರುಗಾಳಿಯನ್ನು ತರುತ್ತದೆ, ಏರುಪೇರು ಮಾಡುತ್ತದೆ. ಆದರೆ

ಇದರಲ್ಲಿ ಹೆದರಬಾರದು. ಬಾಬಾ ಕೃಪೆ ಮಾಡಿ ಎಂದು ಹೇಳುವುದಿಲ್ಲ. ತಂದೆಯೂ ಸಹ ಆಗ ಹೇಳುತ್ತಾರೆ - ಮಕ್ಕಳೇ ಓದಿ ತಮ್ಮ ಮೇಲೆ ತಾವೇ ಕೃಪೆ ಮಾಡಿಕೊಳ್ಳಿ, ನನ್ನ ಕೃಪೆಯಿಂದ ತಾವು ಚಿರಂಜೀವಿಗಳು ಆಗಿಬಿಡುತ್ತೀರೆಂದಲ್ಲ. ದೀರ್ಘ ಆಯಸ್ಸಿನ್ನವರಂತೂ ದೇವತೆಗಳೇ ಇರುತ್ತಾರೆ. ನೀವಿಲ್ಲಿ ಶಾಲೆಯಲ್ಲಿ ಕುಳಿತಿದ್ದೀರಿ, ನಾವು ಈಶ್ವರೀಯ ಕಾಲೇಜಿಗೆ ಹೋಗುತ್ತೇವೆ ಎಂದು ಹೇಳುತ್ತೀರಿ ಎಂದಮೇಲೆ ಸ್ವರ್ಗದ ರಚಯಿತನಾದ ತಂದೆಯೇ ಅವಶ್ಯವಾಗಿ ದೇವೀ-ದೇವತೆಗಳನ್ನಾಗಿ ಮಾಡುತ್ತಾರೆ. ಭಗವಾನುವಾಚ ನಿಮಗೆ ತನ್ನ ಮತ್ತು ಇಡೀ ಸೃಷ್ಟಿಯ ಆದಿ ಮಧ್ಯ ಅಂತ್ಯದ ರಹಸ್ಯವನ್ನು ತಿಳಿಸುತ್ತೇನೆ. ಈ ಸ್ವದರ್ಶನಚಕ್ರವನ್ನು ತಿರುಗಿಸುವುದರಿಂದ ನೀವು ಚಕ್ರವರ್ತಿ ರಾಜಾ-ರಾಣಿಯರಾಗುತ್ತೀರಿ. ಪವಿತ್ರರಂತೂ ಅವಶ್ಯವಾಗಿ ಆಗಬೇಕಾಗಿದೆ. ತಂದೆಯೊಂದಿಗೆ ಪ್ರತಿಜ್ಞೆ ಮಾಡಬೇಕಾಗಿದೆ, ಇಲ್ಲದಿದ್ದರೆ ಮೃತ್ಯುವಿನ ಬಾಯಿಯಲ್ಲಿ ಹೊರಟು ಹೋಗುತ್ತೀರಿ ನಂತರ ಇಷ್ಟು ಶ್ರೇಷ್ಠ ಪದವಿಯನ್ನು ಪಡೆಯಲು ಸಾಧ್ಯವಿಲ್ಲ. ಕಾಮಚಿತೆಯಿಂದ ಕಪ್ಪಾಗಿಬಿಡುತ್ತೀರಿ. ಜ್ಞಾನಚಿತೆಯ ಮೇಲೆ ಕುಳಿತುಕೊಳ್ಳುವುದರಿಂದ ನೀವು ಸುಂದರರಾಗುತ್ತೀರಿ. ಮಕ್ಕಳನ್ನು ಸುಂದರರನ್ನಾಗಿ ಮಾಡುವುದು ತಂದೆಯ ಕರ್ತವ್ಯವಾಗಿದೆ, ಇದಕ್ಕೋಸ್ಕರ ಅವಶ್ಯವಾಗಿ ಸಂಗಮ ಯುಗದಲ್ಲಿಯೇ ಬರಬೇಕಾಗುತ್ತದೆ. ಇದು ಎಲ್ಲದಕ್ಕಿಂತ ಉತ್ತಮ ಯುಗವಾಗಿದೆ, ಯಾವಾಗ ಆತ್ಮಗಳು ಮತ್ತು ಪರಮಾತ್ಮನ ಮೇಳವಾಗುತ್ತದೆ. ನಿರಾಕಾರ ತಂದೆಯು ಈ ಶರೀರದ ಲೋನ್ ತೆಗೆದುಕೊಂಡಿದ್ದಾರೆ ಏಕೆಂದರೆ ಅವರಿಗೆ ತನ್ನದೇ ಆದ ಶರೀರವಿಲ್ಲ. ಈ ಜ್ಞಾನ ಚಕ್ಷುವನ್ನು ಆ ಒಬ್ಬ ಜ್ಞಾನೇಶ್ವರನ ವಿನಃ ಮತ್ಯಾರೂ ತೆರೆಸಲು ಸಾಧ್ಯವಿಲ್ಲ. ಪಾವನ ಆತ್ಮಗಳು ಯಾರೆಲ್ಲರೂ ಬರುತ್ತಾರೋ ಅವರು ನಂತರ ಪತಿತರಾಗಿಬಿಡುತ್ತಾರೆ. ಸತೋ-ರಜೋ-ತಮೋದಲ್ಲಿ ಬರಲೇಬೇಕಾಗಿದೆ. ಈ ಸಮಯದಲ್ಲಿ ಎಲ್ಲರೂ ಪತಿತರಾಗಿದ್ದಾರೆ ಮತ್ತು ಎಲ್ಲರೂ ಇಲ್ಲಿಯೇ ಇದ್ದಾರೆ. ಹಿಂತಿರುಗಿ ಯಾರೂ ಹೋಗಿಲ್ಲ. ಈಗ ನೀವು ಮಕ್ಕಳು ವಿಶ್ವದ ಮಾಲೀಕರಾಗುತ್ತಿದ್ದೀರಿ. ಶಿವತಂದೆಯು ತಿಳಿಸುತ್ತಾರೆ - ಮಕ್ಕಳೇ ನಾನಂತೂ ನಿಷ್ಕಾಮಿ ಆಗಿದ್ದೇನೆ, ನಿಮ್ಮನ್ನು ವಿಶ್ವಕ್ಕೆ ಮಾಲೀಕರನ್ನಾಗಿ ಮಾಡುತ್ತೇನೆ ಆದರೆ ನನಗೆ ಯಾವುದೇ ಫಲದ ಆಸೆ ಇಲ್ಲ ಅಂದಾಗ ನಾನು ನಿಷ್ಕಾಮಿ ಆದೆನಲ್ಲವೇ.

ತಂದೆಯು ತಿಳಿಸಿದ್ದಾರೆ - ಇಲ್ಲಿ ತಮ್ಮನ್ನು ಆತ್ಮನೆಂದು ತಿಳಿದು ಅಶರೀರಿ ಆಗಿ ಕುಳಿತುಕೊಳ್ಳಿ. ಈಗ ನಾವು ಹಿಂತಿರುಗಿ ಹೋಗುತ್ತೇವೆ ನಂತರ ಸ್ವರ್ಗದಲ್ಲಿ ರಾಜ್ಯ ಮಾಡಲು ಬರುತ್ತೇವೆ. ಈ ಶರೀರವನ್ನು ಬಿಟ್ಟು ಅಶರೀರಿ ಆಗಿ ಹೋಗಬೇಕಾಗಿದೆ. ಈಗ ಈ ಶರೀರವು ಹಳೆಯದಾಗಿದೆ, ಆದ್ದರಿಂದ ಪುನಃ ನಾವೀಗ ಮನೆಗೆ ಹೋಗುತ್ತೇವೆ. ಕಲ್ಪ-ಕಲ್ಪ ನಾವು ರಾಜ್ಯವನ್ನು ಪಡೆಯುತ್ತೇವೆ ಮತ್ತು ಕಳೆದುಕೊಳ್ಳುತ್ತೇವೆ. ತಂದೆಯು ಸುಖ-ದುಃಖ ಎರಡನ್ನು ಕೊಡುವುದಿಲ್ಲ. ಅವರು ಸದಾ ಸುಖದಾತನಾಗಿದ್ದಾರೆ. ಈ ವಿನಾಶ ಜ್ವಾಲೆಯು ರುದ್ರ ಗೀತಾಜ್ಞಾನ ಯಜ್ಞದಿಂದಲೇ ಪ್ರಜ್ವಲಿತವಾಗುತ್ತದೆ ಎಂದು ತಂದೆಯು ತಿಳಿಸುತ್ತಾರೆ. ಮಕ್ಕಳು ಇದರ ಸಾಕ್ಷಾತ್ಕಾರವನ್ನು ನೋಡಿದ್ದೀರಿ - ಯಾವ ವಸ್ತುವನ್ನು ಸಾಕ್ಷಾತ್ಕಾರದಲ್ಲಿ ನೋಡಿದ್ದೀರೋ ಅದನ್ನು ಮತ್ತೆ ಈ ಕಣ್ಣುಗಳಿಂದ ನೋಡುತ್ತೀರಿ. ಯಾವುದನ್ನು ದಿವ್ಯದೃಷ್ಟಿಯಿಂದ ನೋಡಿದ್ದೀರೋ ಆ ಸ್ವರ್ಗದಲ್ಲಿ ನೀವು ಪ್ರತ್ಯಕ್ಷ ರೂಪದಲ್ಲಿ ವಿರಾಜಮಾನರಾಗುತ್ತೀರಿ. ಈಗ ನೀವು ಕೃಷ್ಣಪುರಿಯಲ್ಲಿ ಹೋಗಲು ಪುರುಷಾರ್ಥ ಮಾಡುತ್ತಿದ್ದೀರಿ, ಭಗವಂತ ಭಕ್ತರ ಕಲ್ಯಾಣ ಮಾಡಲು ಗತಿ-ಸದ್ಗತಿಯನ್ನು ಕೊಡಲು ಬರುತ್ತಾರೆ, ಅಂದಾಗ ನೀವು ಭಗವಂತನ ಮುಖಾಂತರ ಸ್ವರ್ಗದ ಆಸ್ತಿಯನ್ನು ಪಡೆಯುತ್ತಿದ್ದೀರಿ. ಜ್ಞಾನ ಮತ್ತು ಭಕ್ತಿ ಎರಡು ಮಾತುಗಳಾಗಿದೆ. ಒಳ್ಳೆಯದು.

ಮಧುರಾತಿ ಮಧುರ ಅಗಲಿ ಹೋಗಿ ಮರಳಿ ಸಿಕ್ಕಿರುವಂತಹ ಮಕ್ಕಳಿಗೆ ಪ್ರೀತಿಯ ಮಾತಾ-ಪಿತ ಬಾಪ್ದಾದಾರವರ ನೆನಪು ಪ್ರೀತಿ ಹಾಗೂ ಸುಪ್ರಭಾತ. ಆತ್ಮೀಯ ಮಕ್ಕಳಿಗೆ ಆತ್ಮೀಯ ತಂದೆಯ ನಮಸ್ತೆ.

ಧಾರಣೆಗಾಗಿ ಮುಖ್ಯಸಾರ:

1. ವಿದ್ಯೆಯನ್ನು ಓದಿ ತಮ್ಮ ಮೇಲೆ ತಾವು ಕೃಪೆ ಮಾಡಿಕೊಳ್ಳಬೇಕಾಗಿದೆ. ತಂದೆಯಿಂದ ಕೃಪೆ ಬೇಡಬಾರದು. ಶ್ರೇಷ್ಠಾತಿಶ್ರೇಷ್ಠ ತಂದೆಯ ಶ್ರೀಮತದಂತೆ ನಡೆಯುತ್ತಾ ಇರಬೇಕಾಗಿದೆ.

2. ಸ್ವದರ್ಶನ ಚಕ್ರಧಾರಿಗಳಾಗಿ ಮಾಯಾಜೀತ್, ಜಗತ್ಜೀತರಾಗಬೇಕಾಗಿದೆ. ಮಾಯೆಗೆ ಹೆದರಬಾರದು ಅಥವಾ ಗಾಬರಿ ಆಗಬಾರದಾಗಿದೆ. ಅಶರೀರಿ ಆಗುವ ಅಭ್ಯಾಸ ಮಾಡಬೇಕಾಗಿದೆ.

ವರದಾನ: ಮನಸ್ಸು, ವಾಣಿ ಮತ್ತು ಕರ್ಮದ ಮೂಲಕ ಒಂದೇ ಸಮಯ ಜೊತೆ-ಜೊತೆ ಸೇವೆ ಮಾಡುವಂತಹ ಸಫಲತಾ ಸಂಪನ್ನ ಭವ.

ಯಾವಾಗಲೂ ಯಾವುದೇ ಸ್ಥಾನದಲ್ಲಿ ಸೇವೆ ಪ್ರಾರಂಭ ಮಾಡಬೇಕಾದರೆ ಒಂದೇ ಬಾರಿಗೆ ಸರ್ವ ಪ್ರಕಾರದ ಸೇವೆ ಮಾಡಿ. ಮನಸ್ಸಿನಿಂದ ಶುಭ ಭಾವನೆ, ವಾಣಿಯಿಂದ ತಂದೆಯ ಜೊತೆ ಸಂಬಂಧವನ್ನು ಜೋಡಿಸುವಂತಹ ಶುಭ ಕಾಮನೆಯ ಶ್ರೇಷ್ಠ ಮಾತು ಮತ್ತು ಸಂಬಂಧ-ಸಂಪರ್ಕದಲ್ಲಿ ಬರುವುದರಿಂದ ಸ್ನೇಹ ಮತ್ತು ಶಾಂತಿಯ ಸ್ವರೂಪದಿಂದ ಆಕರ್ಷಿತ ಮಾಡಿ. ಈ ರೀತಿಯ ಸರ್ವ ಪ್ರಕಾರದ ಸೇವೆ ಜೊತೆ-ಜೊತೆಯಲ್ಲಿ ಮಾಡುವುದರಿಂದ ಸಫಲತಾ ಸಂಪನ್ನರಾಗುವಿರಿ. ಸೇವೆಯ ಪ್ರತಿ ಹೆಜ್ಜೆಯಲ್ಲಿ ಸಫಲತೆ ಸಮಾವೇಶವಾಗಿದೆ - ಇದೇ ನಿಶ್ಚಯದ ಆಧಾರದ ಮೇಲೆ ಸೇವೆ ಮಾಡುತ್ತಾ ಹೋಗಿ.

ಸ್ಲೋಗನ್: ಶುದ್ಧ ಸಂಕಲ್ಪಗಳನ್ನು ನಿಮ್ಮ ಜೀವನದ ಅಮೂಲ್ಯ ಖಜಾನೆಯನ್ನಾಗಿ ಮಾಡಿಕೊಂಡಾಗ ಅದೇ ಸಂಕಲ್ಪ ಏಳುತ್ತೆ, ಯಾವುದರಲ್ಲಿ ತಮ್ಮ ಮತ್ತು ಅನ್ಯರ ಕಲ್ಯಾಣ ಸಮಾವೇಶವಾಗಿದೆ.